# ಅಂಚೆ ಮತ್ತು ತೆರಪಿನ ಶಿಕ್ಷಣ
# ತೃತೀಯ ಬಿ.ಎ. ಪದವಿ ಪರೀಕ್ಷೆ,
# ಆಗಸ್ಟ್/ಸೆಪ್ಟೆಂಬರ್ 2010

ಕನ್ನಡ ಐಚ್ಛಿಕ ಪತ್ರಿಕೆ - ಯು.ಕೆ. - ೩

(ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು)

(ಪಂಪಭಾರತ ಸಂಗ್ರಹ, ವಡ್ಡಾರಾಧನೆ ಮತ್ತು ಛಂದಸ್ಸು)

(ಹೊಸಬರಿಗೆ)

ಅವಧಿ: *3* ಗಂಟೆಗಳು.] [ಅಂಕಗಳು: *80*

## 'ಅ' ವಿಭಾಗ - ಹಳಗನ್ನಡ ಪಠ್ಯಗಳು

1. ಅ) **ಒಂದರ** ಭಾವ ಸ್ವಾರಸ್ಯವನ್ನು ವಿವರಿಸಿ. 7 ಅಂಕಗಳು

೧) ಮತ್ತಿತ್ತರಸಂ ನೇಸರ್ಮೂಡೆ ಹಾರಮಂ ಕಾಣದೆ ಆಸ್ಥಾನಮಂಟಪದೊಳ್ ಸಿಂಹಾಸನಮಸ್ತಕ ಸ್ಥಿತನಾಗಿರ್ದು ತಳಾಱನಪ್ಪ ಯಮದಂಡಂಗೆ ಬಱಿಯಟ್ಟಿವರಿಸಿ ಇಂತೆಂದನೆಲವೊ ಯಮದಂಡಾ ಪೊಱಲ ಪಾರ್ವರ ಪರದರ ಸೂಳೆಯರ ಒಕ್ಕಲ ಮಕ್ಕಳ ಕಸವರಮೆಲ್ಲವಂ ಕಳ್ಳೊಡಮಾರಯ್ಯದೆ ಕೆಮ್ಮಗಿರ್ದಪೆಯಲ್ಲದೆಯುಮೆಮ್ಮ ಸಜ್ಜೆಯೋವರಿಯಂ ಕಳ್ಳಂ ಪೊಕ್ಕು ಪುಡಿಕೆಯಂ ತೆಱೆತೆದಚ್ಯುತೇಂದ್ರನಿತ್ತ ಕುಲಧನಹಾರಮಂ ಕೊಂಡುಪೋದಂ ಬೇಗಂ ಕಳ್ಳನನಾರಯ್ದು ಹಾರಮಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನೆಂದೊಡೆ ತಳಾಱನೆಂದಂ ದೇವಾ ಏೞು ದಿವಸಮೆನಗೆಡೆಯನೀವುದು.

೨) ಬಾಲ ಕಮಳಂಗಳಂ ಕಮ
ಳಾಲಯದಿಂ ತಿಱಿದು ತರ್ಪ್ಪವೋಲ್ ತಂದ್ಯೆ ನೀಂ |
ಬಾಲಕರ ತಲೆಗಳಕ್ಕಟ
ಬಾಲಕವಧ ದೋಷಮೆಂತು ನೀಂ ನೀಗಿದಪಯ್ ||

ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ. 4 ಅಂಕಗಳು

೧) ಕುತ್ತ ೨) ಕಾಶ್ಯಪಿ ೩) ಪವನಾತ್ಮಜ ೪) ಮರುಳ್

2. **ಮೂರಕ್ಕೆ** ಸಂದರ್ಭಸೂಚಿಸಿ ಸ್ವಾರಸ್ಯ ಬರೆಯಿರಿ. 9 ಅಂಕಗಳು

೧) ಇವರ್ ಮೂರ್ಖರೇನುಮೋದುಗಳನಱಿಯರ್

೨) ಕಳ್ಳನನಾರಯ್ಯಲಾಱದಾಗಳ್ ದೇವರೆನ್ನಂ ಮೆಚ್ಚುಕೆಯ್ವುದು

೩) ಕಟ್ಟು ಬೀರವಟ್ಟಮನರಸಾ

೪) ಸಾಮಾನ್ಯಮೆ ಬಗೆಯೆ ಭವತ್ಕ್ಲೇಶಪಾಶ ಪ್ರಪಂಚಂ

೫) ಒಡಲೆರಡೊಂದೆ ಜೀವಮಿವರ್ಗೆ

3. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ವಡ್ಡಾರಾಧನೆ ಕೃತಿಯ ಕರ್ತೃ, ಕಾಲ ಮತ್ತು ದೇಶ ವಿಚಾರಗಳನ್ನು ಬರೆಯಿರಿ.

೨) ಸುಕುಮಾರಸ್ವಾಮಿ ಕತೆಯಲ್ಲಿ ಉಪಕತೆಗಳ ಮಹತ್ವವನ್ನು ವಿವರಿಸಿ.

4. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ದಾನಶೂರ ಕರ್ಣನಿಗೆ ಸೇನಾಪಟ್ಟ ಕಟ್ಟಲು ಕಾರಣವೇನು ? ವಿವರಿಸಿ.

೨) ಕರ್ಣಾರ್ಜುನರ ಕಾಳಗದ ಸಂದರ್ಭವನ್ನು ಬರೆಯಿರಿ. .

**'ಆ' ವಿಭಾಗ - ಛಂದಸ್ಸು**

5. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. $10 \times 2 = 20$ ಅಂಕಗಳು

೧. ಗಣಗಳು ಎಂದರೇನು ? ಗಣಗಳ ಬಗೆಗಳನ್ನು ವಿವರಿಸಿ.

೨. ಕಂದ ಪದ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ಚರ್ಚಿಸಿ.

೩. ಷಟ್ಪದಿಯ ಮೂಲ ಮತ್ತು ಬಗೆಗಳನ್ನು ವಿವರಿಸಿ.

6. ಯಾವುದಾದರೂ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸಿನ ಹೆಸರು ಬರೆಯಿರಿ. $5 \times 2 = 10$ ಅಂಕಗಳು

೧. ಬಿಸರುಹೋದ್ಭವ ಗಣಂ ರಸದಶಸ್ಥಾನದೊಳ್
ಬಿಸರುಹನೇತ್ರ ಗಣಮೆ ಬರ್ಕುಟಿರುವು
ಬಿಸರುಹ ನೇತ್ರೇ ತ್ರಿಪದಿಗೆ

೨. ನೆನೆಯದಿರಣ್ಣ ಭಾರತದೊಳಿಂಪೆಊರಾಊಮನೊಂದೆ ಚಿತ್ತದಿಂ

೩. ಅಕ್ಕರ ಛಂದವು ಸಾಂಗತ್ಯ ಸಂಸ್ಕಾರ ಹೊಂದಿಲ್ಲ ಬಂದಿದೆ ಹೊಸಹೊಸದು.

7. ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ. $5 \times 2 = 10$ ಅಂಕಗಳು

೧) ಉತ್ಪಲ ಮಾಲೆ ೨) ಮುಡಿ ೩) ಪ್ರಾಸ

* ** *